ಮಾಗಡಿ ಟೌನಿಗೆ ಮಂಚನಬೆಲೆ ಅಥವಾ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕುಡಿಯಲಿಗಾಗಿ ನೀರನ್ನು ಪೂರೈಸುವುದು.

೧೩೧೧ ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ). —ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಮಾಗಡಿ ಟೌನಿಗೆ ಈಗ ಒದಗಿಸಲಾಗಿರುವ ಕುಡಿಯುವ ನೀರಿನ ಯೋಜನೆಗಳಾವುವು?

ಆ) ಈ ಯೋಜನೆಗಳಿದ್ದಾಗ್ಯೂ ಮಾಗಡಿ ಟೌನಿನ ಜನತೆಗೆ ಕುಡಿಯಲಿನ ನೀರಿನ ಕೊರತೆ ಇರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಇ) ಹಾಗಿದ್ದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಇದುವರೆವಿಗೂ ಕೈಗೊಂಡ ಕ್ರಮಗಳೇನು ?

ಈ) ಈ ಟೌನಿಗೆ ಮಂಚನಬೆಲೆ ಅಥವಾ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕುಡಿಯಲಿನ ನೀರನ್ನು ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಟಿ ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು.)—

ಅ) ಮಾಗಡಿ ಪಟ್ಟಣಕ್ಕೆ ಒಂದು ಕುಡಿಯುವ ನೀರು ಅಭಿವೃದ್ಧಿ ಯೋಜನೆಯನ್ನು ರೂ ೮೪. ೫೦ ಲಕ್ಷಗಳ ಅಂದಾಜಿಗೆ ೧೯೮೨ ರಲ್ಲಿ ಮಂಜೂರಾತಿ ದೊರೆತಿದ್ದು, ೧೯೮೨ರಲ್ಲಿ ಪ್ರಾರಂಭಿಸಿ ಎಲ್ಲಾ ಕಾಮಗಾರಿಗಳನ್ನು ೧೯೮೭ರಲ್ಲಿ ಪೂರ್ಣಗೊಳಿಸಲಾಗಿದೆ.

ಹಾಗೂ ೧೯೮೭—೮೮ ಮತ್ತು ೧೯೮೮—೮೯ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಹಿಂದುಳಿದ ಜನಾಂಗಕ್ಕೆ ರೂ. ೨. ೭೧ಲಕ್ಷ ಅಂದಾಜಿನಲ್ಲಿ ಕುಡಿಯುವ ನೀರನ್ನು ಒದಗಿಸಲಾಗಿದೆ.

ಆ) ಈ ಪಟ್ಟಣಕ್ಕೆ ಕುಡಿಯುವ ನೀರಿನ ಜಲಮೂಲವು ಕೊಳವೆ ಬಾವಿಗಳಾಗಿದ್ದು, ಈ ಕೊಳವೆ ಬಾವಿಗಳಲ್ಲಿ ಕ್ರಮೇಣ ಇಳುವರಿಯು ಕಡಿಮೆಯಾದ ಕಾರಣ ಪಟ್ಟಣದ ಕೆಂಡಿಯುವ ನೀರಿನ ಪ್ರಮಾಣ ಕಡಿಮೆಯಾಗಿದೆ ಹಾಲಿ ಪಟ್ಟಣದಲ್ಲಿ ದಿನಂಪ್ರತಿ ತಲಾ ೫೦ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಇ) ನೀರಿನ ಅಭಾವ ಸಮಸ್ಯೆಗಳನ್ನು ಬಗೆಹರಿಸಲು ಪಟ್ಟಣದ ತಿರುಮಲೆಪ್ಪ ದೇಶದಲ್ಲಿ ೨ ಕೊಳವೆ ಬಾವಿ ಗಳನ್ನು ಕೊರೆದು ವಿದ್ಯುತ್ ಪಂಪುಗಳನ್ನು ಅಳವಡಿಸಿಕೊಡಲಾಗಿದೆ.ಭಾರ್ಗವತಿ ಪ್ರದೇಶದಲ್ಲಿ ಯೋಜನೆ ಯಲ್ಲಿ ಅಳವಡಿಸಿರುವ ಕೊಳವೆ ಬಾವಿಗಳ ಇಳುವರಿ ಕಡಿಮೆಯಾಗಿದೆ. ಆದುದರಿಂದ ಈ ಪ್ರದೇಶದಲ್ಲಿ ನೀರು ಸರಬರಾಜನ್ನು ಸುಧಾರಿಸಲು ೨ ಕೊಳವೆ ಬಾವಿಗಳನ್ನು ಕೊರೆಯಲಾಯಿತು ಇವುಗಳಿಂದಲೂ ಸಹ ನಿರೀಕ್ಷಿಸಿದಷ್ಟು ಇಳುವರಿ ದೊರಕಲಿಲ್ಲದ ಕಾರಣ ಈ ಪ್ರದೇಶದಲ್ಲಿ ನೀರು ಸರಬರಾಜು ಸುಧಾರಿಸಿರುವುದಿಲ್ಲ. ಈ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ಕೊಳವೆ ಬಾವಿಗಳನ್ನು ಕೊರೆಯಲು ತನಿಖೆ ನಡೆಸಿ, ಕ್ರಮವನ್ನು ತೆಗೆದುಕೊಳ್ಳಲಾಗುವುದು. ಇದೇ ರೀತಿ ತಗ್ಗಿಗುಪ್ಪೆ ಪ್ರದೇಶದಲ್ಲೂ ಸಹ ಕೊಳವೆ ಬಾವಿಗಳನ್ನು ಕೊರೆಯಲು ಉದ್ದೇಶಿಸಲಾಗಿದ್ದು, ತಗ್ಗಿಗುಪ್ಪೆ ಗ್ರಾಮದ ರೈತರ ತಕರಾರಿನ ಕಾರಣ ಪ್ರದೇಶದಲ್ಲಿ ನೀರು ಸರಬರಾಜು ಸುಧಾರಿಸಲು ಕೊಳವೆ ಬಾವಿಗಳನ್ನು ಕೊರೆಯಲು ಸಾಧ್ಯವಾಗಿಲ್ಲ:

ಈ) ಮಂಚನಬೆಲೆ ಜಲಾಶಯದಿಂದ ಮಾಗಡಿ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಸಾಧ್ಯತೆ ಬಗ್ಗೆ ತನಿಖೆಯನ್ನು ನಡೆಸಲಾಗುವುದು. ಇದು ಸಮಂಜಸವೆಂದು ಕಂಡು ಬಂದಲ್ಲಿ ಒಂದು ಯೋಜನೆಯನ್ನು ತಯಾರಿಸಲಾಗುವುದು.